Clause by clause consideration of the Bill.

CLAUSE 2

MR. DEPUTY SPEAKER.—The question is :

"That Clause 2 do stand part of the Bill".

The motion was adopted

Clause 2 was added to the Bill.

CLAUSE 1 ETC.

MR. DEPUTY SPEAKER.—The question is:

"That Clause 1, the Long Title the Preamble and the Enacting Formula do stand part of the Bill".

The motion was adopted

Clause 1, the Long Title, the Preamble and the Enacting Formula were added to the Bill.

Motion to pass

SRI Y. RAMAKRISHNA.—Sir, I beg to move :

"That the Karnataka Local Authorities Official Language (Amendment) Bill, 1980, be passed".

MR. DEPUTY SPEAKER.—The question is :

"That the Karnataka Local Authorities Official Language (Amendment) Bill, 1980 be passed".

The Motion was adopted and the Bill was passed.

The Karnataka Slum areas (Improvement and Clearance) (Amendment) Bill, 1981

Motion to Consider

SRI DHARAM SINGH (Minister for Housing and Urban Development).—Sir, I beg to move.

"That the Karnataka Slum Areas (Improvement and Clearance) (Amendment) Bill, 1981 be taken into consideration."

The question was proposed

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಈಒಂದು ಬಿಲ್ಲನ್ನು ಇಲ್ಲಿ ತರತಕ್ಕಂಥ ಉದ್ದೇಶ ಇಷ್ಟೆ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಬೆಂಗಳೂರು ನಗರದಲ್ಲಿ ಆಗಲೀ, ಹುಬ್ಬಳ್ಳಿ—ಧಾರವಾಡದಲ್ಲಾಗಲೀ, ಮೈಸೂರು ಮತ್ತಿತರ ಪಟ್ಟಣಗಳಲ್ಲಿ ಆಗಲೀ ಕೊಳಚೆ ಪ್ರದೇಶಗಳಲ್ಲಿ ಸಾಕಷ್ಟು ಜನರು ಇದ್ದಾರೆ.

ಇವತ್ತು ಏನಾಗುತ್ತಿದೆ ಎಂದರೆ ಬೆಂಗೂರು ನಗರದಲ್ಲಿ ಕೂಡ ಇವತ್ತು ೫ಲಕ್ಷಕ್ಕೂ ಹೆಚ್ಚಿನ ಜನ ಕೊಳಚೆ ಪ್ರದೇಶದಲ್ಲಿ ಇದ್ದಾರೆ. ನಮಗೆ ಬಂದಿರುವ ವರದಿ ಪ್ರಕಾರ ಪ್ರತಿದಿನ ೩೦೦, ೪೦೦ ಫ್ಯಾಮಿಲಿಗಳು ಹೊರಗಡೆಯಿಂದ ಬೆಂಗಳೂರು ನಗರಕ್ಕೆ ಬರುತ್ತಾ ಇವೆ. ಬೆಂಗಳೂರು ನಗರದಲ್ಲಿ ಇವತ್ತಿನದಿವಸ ಇದೊಂದು ದೊಡ್ಡ ಸಮಸ್ಯೆಯಾಗಿದೆ. ಬೆಂಗಳೂರು ನಗರದಲ್ಲಿರತಕ್ಕಂಥ ಫ್ಯಾಕ್ಟರಿಗಳಲ್ಲಿ ಕೆಲಸಮಾಡುವುದಕ್ಕೆ ಹೊರಗಡೆಯಿಂದ ಬಡ ಕೂಲಿಗಾರರು ಇಲ್ಲಿಗೆ ಬರುತ್ತಿದ್ದಾರೆ, ಮನೆ ಕಟ್ಟಡದ ಕೆಲಸಕಾರ್ಯಗಳಲ್ಲಿ ಕೆಲಸಮಾಡುವುದಕ್ಕೆ ಬಡವರು ಬೇರೆ ಬೇರೆ ಸ್ಥಳಗಳಿಂದ ಪ್ರತಿದಿನ ಬರುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದ ಯಾವುದೇ ನಗರಕ್ಕೆ ಅಥವಾ ಪಟ್ಟಣಕ್ಕೆ ಬೇರೆ ಬೇರೆ ಕಡೆಗಳಿಂದ, ಜನರು ಬರಲಿಕ್ಕೆ ಆರಂಭ ಮಾಡಿದರೆ ಆ ನಗರದಲ್ಲಿರತಕ್ಕಂಥ ಕಾರ್ಪೊರೇಷನ್‌ಗೆ ಅವರಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸ ತಕ್ಕಂಥಾದ್ದು ಕರ್ತವ್ಯ ವಾಗುತ್ತದೆ. ಅವರ ಪ್ರತಿನಿತ್ಯದ ಜೀವನಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಬೇಕಾಗುತ್ತದೆ. ಇವತ್ತು ಅವರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಬೇಕಾಗುತ್ತದೆ, ಅವರು ವಾಸ ಮಾಡುವ ಕಡೆ ದೀಪದ ವ್ಯವಸ್ಥೆ, ರಸ್ತೆ ವ್ಯವಸ್ಥೆ, ನೀರಿನ ವ್ಯವಸ್ಥೆ ಮಾಡಿಕೊಡಬೇಕಾಗುತ್ತದೆ. ಇವತ್ತು ಬೆಂಗಳೂರಿನಲ್ಲಿರತಕ್ಕಂಥ ಜನರಿಗೆ ಸಾಕಷ್ಟು ನೀರನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ.

೫–೩೦ ಪಿ. ಎಂ.

ಬೆಂಗಳೂರು ನಗರದ ಜನಸಂಖ್ಯೆ ಮೂವತ್ತೈದು ಲಕ್ಷಕ್ಕೂ ಮೀರಿ ಹೆಚ್ಚಾಗಬಾರದೆಂದು ನಮಗೆ ಅಂದಾಜು ಇದೆ. ಹಾಲಿ ಇರುವ ಕೊಳಚೆ ಪ್ರದೇಶಗಳನ್ನು ಸುಧಾರಣೆ ಮಾಡಬೇಕು. ಕೊಳಚೆ ಪ್ರದೇಶ ಗಳಿಗೆ ದೀಪ, ರಸ್ತೆ ಮುಂತಾದ ಸೌಕರ್ಯಗಳನ್ನು ಕೊಡಲಿಕ್ಕೆ ೧೯೭೫ ರಿಂದಲೂ ಕೊಳಚೆ ನಿರ್ಮೂಲನ ಮಂಡಲಿ ಪ್ರಯತ್ನ ಮಾಡುತ್ತಿದೆ. ಮತ್ತು ಇತರ ಪಟ್ಟಣಗಳಲ್ಲೂ ಇರುವ ಕೊಳಚೆ ಪ್ರದೇಶಗಳಲ್ಲೂ ಸಾಕಷ್ಟು ಕೆಲಸ ಕಾರ್ಯಗಳನ್ನು ನಾವು ತೆಗೆದುಕೊಂಡಿದ್ದೇವೆ. ಹೆಚ್ಚಿಗೆ ಕೊಳಚೆ ಪ್ರದೇಶಗಳು ಆದಂತೆಲ್ಲ ಅವರಿಗೆ ಬದಲಿ ನಿವೇಶನಗಳನ್ನು ಎಲ್ಲಿ ಕೊಡಬೇಕೆಂದು ಪ್ರಶ್ನೆ ಕೂಡ ಇದೆ. ಬೆಂಗಳೂರು ನಗರದಲ್ಲಿ ಈಗ ಕೊಳಚೆ ಪ್ರದೇಶಗಳನ್ನು ಬೆಳೆಯುವುದಕ್ಕೆ ಬಿಟ್ಟರೆ ಮುಂದೆ ಅವರಿಗೆ ಎಲ್ಲಿ ಬದಲಿ ನಿವೇಶನಗಳನ್ನು ಕೊಡಬೇಕೆಂಬ ಪ್ರಶ್ನೆ ನಮ್ಮ ಎದುರಿನಲ್ಲಿದೆ. ಜೊತೆಗೆ, ಬೆಂಗಳೂರು ನಗರವನ್ನು ಸುಂದರ ನಗರ ವನ್ನಾಗಿ ಕಾಪಾಡಿಕೊಂಡು ಹೋಗಬೇಕಾಗಿದೆ. ಇದು ನಮ್ಮ ರಾಜ್ಯದ ರಾಜಧಾನಿಯಾಗಿದೆ. ಈಗ ಇರುವ ಕೊಳಚೆ ಪ್ರದೇಶಗಳಿಗೆ ಮೊದಲು ಸೌಕರ್ಯಗಳನ್ನು ಒದಗಿಸಿಕೊಡಬೇಕಾಗಿದೆ ಹಾಲಿ ಇರುವ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸುತ್ತಾ ಮುಂದೆ ಕೂಡ ಕೊಳಚೆ ಪ್ರದೇಶಗಳನ್ನು ಬೆಳೆಯುವುದಕ್ಕೆ ಇದೇರೀತಿ ಬಿಟ್ಟರೆ ಮುಂದೆ ತೊಂದರೆಯಾಗಬಹುದೆನ್ನುವ ದೃಷ್ಟಿಯಿಂದ ಸದ್ಯ ಜಾರಿಯಲ್ಲಿರುವ ಕಾನೂನಿಗೆ ಕೆಲವು ಹೆಚ್ಚಿನ ಅಧಿಕಾರಿಗಳನ್ನು ಕೊಡುವುದರ ಸಲುವಾಗಿ ತಿದ್ದುಪಡಿ ತರಲಾಗಿದೆ, '' ಗುಡಿಸಲುಗಳು '' ಎಂಬ ಪದಕ್ಕೆ ವ್ಯಾಖ್ಯಾನ ನೀಡಲಾಗಿದೆ. ಎಲ್ಲಿಯಾದರೂ ಒಂದು ಜಾಗಕ್ಕೆ ಹೋಗಿ ಅಲ್ಲಿ ಕೊಳಚೆ ಪ್ರದೇಶ ನಿರ್ಮಾಣ ಮಾಡಿದರೆ, ಕೊಳಚೆ ನಿರ್ಮೂಲನ ಮಂಡಲಿಯವರು ಅಲ್ಲಿಗೆ ಹೋಗಿ ಗುಡಿಸಲು ಗಳನ್ನು ಕಿತ್ತುಹಾಕುವುದಕ್ಕೆ ಅವಕಾಶ ಕೊಡಲಾಗಿದೆ. ಅಲ್ಲದೆ ಜೋಪಡಿಗಳನ್ನು ಹಾಕುವುದಕ್ಕೆ ಪ್ರಚೋ ದಿಸುವವರನ್ನೂ ಕೂಡ ಶಿಕ್ಷೆಗೆ ಗುರಿಪಡಿಸುವುದಕ್ಕೆ ಅವಕಾಶ ಮಾಡಲಾಗಿದೆ. ಅದರಲ್ಲಿ ಒಂದು ಸಲ ಮಾಡಿದರೆ ಇಷ್ಟು ಶಿಕ್ಷೆ, ಎರಡನೆ ಸಲ ಮಾಡಿದರೆ ಇಷ್ಟು ಶಿಕ್ಷೆ, ಮತ್ತು ಅಂತಿಮವಾಗಿ ಇಷ್ಟು ಶಿಕ್ಷೆ ಕೊಡಬೇಕೆಂದು ಅವಕಾಶ ಮಾಡಲಾಗಿದೆ.ಈ ತಿದ್ದುಪಡಿಗಳಿಂದ ಸಾಕಷ್ಟು ಅಧಿಕಾರ ಕೊಳಚೆ ನಿರ್ಮೂಲನ ಮಂಡಲಿಗೆ ಕೊಟ್ಟಂತಾಗುತ್ತದೆ. ಬೆಂಗಳೂರು ನಗರದಲ್ಲಿರುವ ಬಿ. ಡಿ. ಎ ಮತ್ತು ನಗರಸಭೆ ಜಮೀನಿ ನಲ್ಲಿರುವ ಕೊಳಚೆ ಪ್ರದೇಶಗಳೂ ಕೊಳಚೆ ನಿರ್ಮೂಲನ ಮಂಡಲಿಯ ಶಾಸನದಡಿ ಬರುವಂತೆ ಅಳವಡಿಸ ಲಾಗಿದೆ. ಈ ತಿದ್ದುಪಡಿಗಳನ್ನು ತರುವುದರಿಂದ ಕೊಳಚೆ ನಿರ್ಮೂಲನ ಮಂಡಲಿ ಪರಿಣಾಮಕಾರಿಯಾಗಿ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ತರಲಾಗಿದೆ ಬೆಂಗಳೂರು ನಗರದ ಶಾಸಕರ ಜೊತೆ ಮಾತನಾಡಿದ ಮೇಲೆ ಮತ್ತು ಎಲ್ಲ ಕಡೆ ತಿರುಗಿ ಬಂದು ನೋಡಿದ ಮೇಲೆ ಕೊಳಚೆ ನಿರ್ಮೂಲನ ಮಂಡಲಿಗೆ ಹೆಚ್ಚು ಅಧಿಕಾರ ಕೊಡಬೇಕೆನ್ನುವ ಭಾವನೆ ವ್ಯಕ್ತವಾಯಿತು. ಆದರಂತೆ ತಿದ್ದು ಪಡಿಗಳನ್ನು ತರಲಾಗಿದೆ.ಇದುರಾಜ್ಯದ ಐದುನಗರಸಭೆಗಳಿಗೂ ಅನ್ವಯಿಸುತ್ತದೆ.ಇದನ್ನು ಮುಂದೆ ನೋಟೀ ಫಿಕೇಷನ್ ಮುಂಬಾತರ ಬೇರೆ ನಗರಸಭೆ ಮತ್ತು ಮುನಿಸಿಪಾಲಿಟಿ ಮತ್ತು ಪುರಸಭೆಗಳಿಗೂ ವಿಸ್ತರಣೆ ಮಾಡಲಾಗುವುದು. ಆದುದರಿಂದ, ಕೊಳಚೆ ನಿರ್ಮೂಲನೆಯನ್ನು ಪರಿಣಾಮಕಾರಿಯಾಗಿ ಮಾಡಲು ಅನುಕೂಲವಾಗುವಂತೆ ತಂದಿರುವ ತಿದ್ದುಪಡಿಯನ್ನು ತಾವೆಲ್ಲರೂ ಒಪ್ಪುತ್ತೀರೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಎಲ್. ತಿಮ್ಮೇಗೌಡ .— ಮಾನ್ಯ ಅಧ್ಯಕ್ಷರೇ, ಈ ಮಸೂದೆ ವಿಚಾರದಲ್ಲಿ ನಾನು ಮೂರು ತಿದ್ದುಪಡಿಗಳನ್ನು ಕಳುಹಿಸಿದ್ದೆ. ಅವುಗಳಲ್ಲಿ ಮೊದಲೆರಡನ್ನು ಒತ್ತಾಯಿಸದೆ ಕೊನೆಯ ತಿದ್ದುಪಡಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದು ಬಹಳ ಒಳ್ಳೆಯ ಮಸೂದೆ, ಸ್ವಾಗತಾರ್ಹ ಮಸೂದೆ. ಬೆಂಗಳೂರು ನಗರದಲ್ಲಿ ಬಿ. ಡಿ. ಎ. ನಗರಸಭೆ ಮತ್ತು ಪಾಸಗಿಯವರಿಗೆ ಸೇರಿದ ಜಾಗಗಳಲ್ಲಿ ಕೊಳಚೆ ಪ್ರದೇಶಗಳು ಬೆಳೆಯುತ್ತಿವೆ. ಮಾನ್ಯ ಸಚಿವರು ಹೇಳಿದ ಹಾಗೆ ಪ್ರತಿ ದಿವಸ ಬೆಂಗಳೂರು ನಗರಕ್ಕೆ ಸುಮಾರು ಮೂರು ನೂರು ಜನರು ಹೊರಗಿನಿಂದ ಬರುತ್ತಿದ್ದಾರೆ. ನಾನು ಗೃಹ ನಿರ್ಮಾಣ ಮಂಡಲಿ ಅಧ್ಯಕ್ಷನಾಗಿದ್ದಾಗ ಬೆಂಗಳೂರು ನಗರದಲ್ಲಿ ೧೧೦ ಕೊಳಚೆ ಪ್ರದೇಶಗಳಿದ್ದವು. ಆದರೆ ಇಂದು ೪೪೦ ಕೊಳಚೆ ಪ್ರದೇಶಗಳಿವೆ. ಅವುಗಳಲ್ಲಿ ೨೨೦ ಕೊಳಚೆ ಪ್ರದೇಶಗಳನ್ನು ಸರ್ಕಾರದವರು ಮಾನ್ಯ ಮಾಡಿದ್ದಾರೆ. ಮತ್ತು ಅವುಗಳಿಗೆ ನಲ್ಲಿ, ದೀಪ ಮುಂತಾದ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದಾರೆ. ಇನ್ನುಳಿದ ಕೊಳಚೆಪ್ರದೇಶವನ್ನು ಮಾನ್ಯ ಮಾಡಿಲ್ಲ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಬೇಕಾಗಿದೆ. ಮಾನ್ಯ ಸಚಿವರ ನಾಯಕತ್ವದಲ್ಲಿ ನಗರದ ಶಾಸಕರೆಲ್ಲರೂ ಮೊನ್ನೆ ತಮಿಳುನಾಡಿಗೆ ಹೋಗಿದ್ದೆವು. ಅಲ್ಲಿ ೧೯೭೬ನೇ ಇಸವಿ ನಂತರ ಬಂದ ಕೊಳಚೆ ಪ್ರದೇಶಗಳನ್ನು ಮಾನ್ಯ ಮಾಡದೆ ಅವುಗಳನ್ನು ತೆಗೆಯುವುದಕ್ಕೆ ಕಾರ್ಯಕ್ರಮಹಾಕಿಕೊಂಡಿದ್ದು ಇನ್ನು ಮುಂದೆ ಅಲ್ಲಿ ಕೊಳಚೆ ಪ್ರದೇಶಗಳು ಹುಟ್ಟಿಕೊಳ್ಳದ ರೀತಿಯಲ್ಲಿ ಪ್ರಯತ್ನ ಮಾಡಲು ಅವರು ಸ್ವಲ್ಪ ಮಟ್ಟಿಗೆ ಸಮರ್ಥರಾಗಿದ್ದಾರೆ. ಈಗ ಮಾನ್ಯ ಸಚಿವರು ತಂದಿರುವ ತಿದ್ದುಪಡಿಯನ್ನು ನಾನು ಸ್ವಾಗತ ಮಾಡಿದರೂ, ನಿರ್ದಿಷ್ಟ ತಾರೀಖೊಂದನ್ನು ನಿಗದಿ ಪಡಿಸಿ ಅಲ್ಲಿಂದಾಚೆಗೆ ಹುಟ್ಟಿಕೊಳ್ಳುವ ಕೊಳಚೆ ಪ್ರದೇಶಗಳನ್ನು ತೆಗೆದು ಹಾಕುತ್ತೇವೆ ಎನ್ನುವ ಕಲಂನ್ನೂ ಇದರಲ್ಲಿ ಸೇರಿಸಿ ಅದನ್ನು ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಈಗಿರುವ ಕೊಳಚೆ ಪ್ರದೇಶಗಳನ್ನು ಮಾನ್ಯ ಮಾಡಿ, ಅವುಗಳಿಗೆ ನೀರು, ಕಕ್ಕಸು, ದೀಪ ಮತ್ತಿತರ ಅನುಕೂಲತೆಗಳನ್ನು ಒದಗಿಸಬೇಕಾದರೆ ಕನಿಷ್ಟ ಹಲವಾರು ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕಾಗುತ್ತದೆ. ಇನ್ನೊಂದು ವಿಷಾದದ ಸಂಗತಿ ಎಂದರೆ ಬೆಂಗಳೂರಿನಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ಕನ್ನಡಿಗರು ಇರುವುದು ಕೇವಲ ೮–೧೦ ಕೊಳಚೆ ಪ್ರದೇಶಗಳಲ್ಲಿ ಮಾತ್ರ. ಉಳಿದ ಕೊಳಚೆ ಪ್ರದೇಶಗಳಲ್ಲಿ ರಾಜ್ಯದ ಹೊರಗಡೆಯಿಂದ ಬಂದಿರುವವರಿದ್ದಾರೆ. ಕನ್ನಡಿಗರಿಂದ ವಸೂಲಾಗುವ ತೆರಿಗೆಯ ಹಣವನ್ನು ಬೇರೆ ರಾಜ್ಯಗಳಿಂದ ಬಂದಿರುವವರಿಗಾಗಿ ಖರ್ಚು ಮಾಡುವ ಪರಿಪಾಠವನ್ನು ಬೆಳೆಸಿಕೊಂಡರೆ, ಅದು ನಮ್ಮ ದುರ್ದೈವವಾಗುತ್ತದೆ. ಕನ್ನಡಿಗರಿಗೆ ಏನೇನು ಸೌಲಭ್ಯಗಳು ಸಿಗುತ್ತವೆಂಬುದನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ತಮ್ಮ ಭಾಷಣದಲ್ಲಿ ಹೇಳುವವರಿದ್ದಾರೆ. ಬೆಂಗಳೂರು ನಗರದ ಹಳೆಯ ಪ್ರದೇಶಗಳು, ಅಂದರೆ, ಆರಳೇಪೇಟೆ, ಚಿಕ್ಕಪೇಟೆ, ಕಬ್ಬನ್ ಪೇಟೆ ಮುಂತಾದವುಗಳಿಗೆ ಇಂದು ಕುಡಿಯಲಿಕ್ಕೆ ನೀರಿಲ್ಲದಂತಾಗಿದೆ. ಆದರೆ, ಕೊಳಚೆ ಪ್ರದೇಶಗಳಿಗೆ ನೀರು ಮತ್ತು ಇತರ ಸೌಲಭ್ಯಗಳನ್ನು ಕೊಡಲಾಗುತ್ತದೆ. ಆದುದರಿಂದ, ಒಂದು ನಿಗದಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ನಿರ್ದಿಷ್ಟವಾದ ತಾರೀಖಿನಿಂದೀಚೆಗೆ ಹುಟ್ಟಿಕೊಳ್ಳುವ ಕೊಳಚೆ ಪ್ರದೇಶಗಳನ್ನು ತೆಗೆದು ಹಾಕುವ ಮೂಲಕ ಮುಂದೆ ಅವುಗಳು ಹುಟ್ಟಿಕೊಳ್ಳದ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಮಸೂದೆಯ Clause 5 (c) (1) ರಲ್ಲಿ ಹೀಗೆ ಹೇಳಿದೆ. " If the Board is satisfied that the construction or reconstruction of any building has been commenced or is being carried on or has been completed without obtaining the permission of the licensing authority, under the relevant law, the Board may make a provisional order requiring the owner or the builder or the occupier of the building to demolish the work done and may also direct that the owner or the builder shall refrain from proceedings with the work of construction or reconstruction of the building. "

ಇದಾದ ನಂತರ ಕಟ್ಟಡವನ್ನು ಉರುಳಿಸಿದ ಮೇಲೆ ಏನು ಮಾಡಬೇಕೆನ್ನುವುದು ಬಹಳ ಆವಶ್ಯಕ. ಅದಕ್ಕಾಗಿ ನಾನೊಂದು ತಿದ್ದುಪಡಿ ತಂದಿದ್ದೇನೆ. ಅದೇನೆಂದರೆ, " May also direct the occupier to vacate form the premises as the case may be "……

(ಅಧ್ಯಕ್ಷರು ಪೀಠದಲ್ಲಿದ್ದರು)

ಕೊಳಚೆಪ್ರದೇಶಗಳಲ್ಲಿ ಆಥವಾ ಬೇರೆ ನಿವೇಶನಗಳ ಮೇಲೆ ಯಾರು ಜೋಪಡಿಗಳನ್ನು ಹಾಕಿಕೊಳ್ಳುತ್ತಾರೆ. ಅವರಿಗೆ ಕಾನೂನು ಪ್ರಕಾರ ನೋಟೀಸ್ ಕೊಟ್ಟು, ಅದನ್ನು ಉರುಳಿಸಿದ ಮೇಲೆ, ಅಲ್ಲಿಂದ ಆತನು ಖಾಲಿ ಮಾಡಿಸುವ ನೋಟೀಸ್‌ನ್ನೂ ಕೊಡದಿದ್ದರೆ ಆ ಜೋಪಡಿಯನ್ನು ಉರುಳಿಸಿದ ಮೇಲೆ ಆತನು ಇನ್ನೊಂದು ಜೋಪಡಿಯನ್ನು ಕಟ್ಟಬಹುದು. ಆದುದರಿಂದ, ನಾನು ತಂದಿರುವ ತಿದ್ದುಪಡಿಯನ್ನು ಮಾನ್ಯ ಸಚಿವರು ಒಪ್ಪಿಕೊಂಡರೆ ಅವರು ಯಾವ ಸದುದ್ದೇಶದಿಂದ ಈ ತಿದ್ದುಪಡಿ ಮಸೂದೆ ತಂದಿದ್ದಾರೆ. ಅದು ಸಫಲವಾಗುತ್ತದೆಂದು ಹೇಳಬಯಸುತ್ತೇನೆ ಇದರ ಜೊತೆಗೆ, ಈಗಾಗಲೇ ಮಾನ್ಯ ಮಾಡಿರುವ ಕೊಳಚೆ ಪ್ರದೇಶಗಳು ಆದಮೇಲೆ ಹುಟ್ಟಿಕೊಂಡಿರುವ ಹೊಸ ಕೊಳಚೆ ಪ್ರದೇಶಗಳನ್ನು ಮತ್ತೆ ಮಾನ್ಯ ಮಾಡಬಾರದೆಂದೂ, ಅವುಗಳನ್ನು ತೆಗೆದು ಹಾಕುವುದಕ್ಕೆ ಅನುಕೂಲವಾಗುವ ಅಂಶವನ್ನು ಈ ತಿದ್ದುಪಡಿ ಮಸೂದೆಯಲ್ಲಿ ಅಳವಡಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ಇನ್ನು ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಸರ್ಕಾರ ಹಣ ಖರ್ಚು ಮಾಡುತ್ತಿದೆ. ನಾವು ತಮಿಳುನಾಡಿಗೆ ಹೋದಾಗ, ಅಲ್ಲಿನ ಸರ್ಕಾರದವರು ಕೇಂದ್ರಸರ್ಕಾರದ ಮುಖಾಂತರ ವಿಶ್ವಬ್ಯಾಂಕ್‌ನಿಂದ ಹಣ ತರಿಸಿಕೊಂಡು ಅಲ್ಲಿನ ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಖರ್ಚು ಮಾಡುತ್ತಿರುವುದು ನಮಗೆ ಕಂಡುಬಂತು. ಇಂತಹ ಕೆಲಸಗಳಿಗೆ ಶೇಕಡಾ ಎರಡರ ಬಡ್ಡಿಯಂತೆ ವಿಶ್ವಬ್ಯಾಂಕ್‌ನವರು ಸಾಲ ಕೊಡುತ್ತಾರೆ. ಈ ರೀತಿ ಪಡೆದುಕೊಂಡ ಹಣವನ್ನು ತಮಿಳುನಾಡು ಸರ್ಕಾರದವರು ಅಲ್ಲಿನ ಮೆಟ್ರೋಪಾಲಿಟಿನ್ ಬೋರ್ಡಿನವರಿಗೆ ಮತ್ತು ಅಲ್ಲಿನ ಸ್ಲಮ್ ಕ್ಲಿಯರೆನ್ಸ್ ಬೋರ್ಡಿನವರಿಗೆ ಆರೂವರೆ ಪರ್ಸೆಂಟ್ ಬಡ್ಡಿಯ ಮೇಲೆ ಕೊಡುತ್ತಾರೆ. ಈ ಹಣದಿಂದ ಅಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಅಲ್ಲಿನ ರೀತಿಯಲ್ಲಿಯೇ ಇಲ್ಲಿಯೂ ಸಹ ಒಂದು ಮೆಟ್ರೋಪಾಲಿಟಿನ್ ಬೋರ್ಡ್ ರಚನೆ ಮಾಡಬೇಕೆಂದು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಅದನ್ನು ಆದಷ್ಟು ಜಾಗ್ರತೆ ಮಾಡಬೇಕು ಮತ್ತು ವಿಶ್ವಬ್ಯಾಂಕ್‌ನಿಂದ ದುಡ್ಡನ್ನು ತೆಗೆದುಕೊಂಡು ಬಂದು, ಇಲ್ಲಿರುವ ಸ್ಲಮ್‌ಗಳ ಇಂಪ್ರೂವ್‌ಮೆಂಟ್‌ಗೆ ಖರ್ಚು ಮಾಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಹೊಸದಾಗಿ ಸ್ಲಮ್‌ಗಳು ಹುಟ್ಟಿಕೊಳ್ಳದಂತೆ ನೋಡಿಕೊಳ್ಳಬೇಕು ಮತ್ತು ಈಗ ಸರ್ಕಾರದವರು ರೆಕಗ್‌ನೈಜ್ ಮಾಡಿರುವಂತಹ ೨೨೦ ಸ್ಲಮ್‌ಗಳು ಏನಿವೆ, ಅವುಗಳಿಗೆ ಆದಷ್ಟು ಜಾಗ್ರತೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಅಂದರೆ ನೀರಿನ ವ್ಯವಸ್ಥೆ, ಸ್ಯಾನಿಟರಿ ವ್ಯವಸ್ಥೆ, ಹಾಗೂ ರಸ್ತೆಗಳ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು. ಅಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯಾಗಬೇಕು ಮತ್ತು ಅಲ್ಲಿನ ಮಕ್ಕಳು ಆಡಲು ಆಟದ ಮೈದಾನವನ್ನು ಹಾಗೂ ಕಮ್ಯೂನಿಟಿ ಹಾಲ್‌ನ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು. ಅಲ್ಲಿ ವಾಸ ಮಾಡುವ ಜನರ ಅನುಕೂಲಕ್ಕಾಗಿ ಸಾರಿಗೆ ವ್ಯವಸ್ಥೆಯನ್ನು ಹಾಗೂ ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸಿಕೊಡಬೇಕು. ಇದಕ್ಕೆ ಆಗುವ ಖರ್ಚನ್ನು ಭರಿಸಲು ವಿಶ್ವಬ್ಯಾಂಕ್‌ನವರು ಸಾಲ ಕೊಡುತ್ತಾರೆ. ಅಲ್ಲಿಂದ ಸಾಲ ಪಡೆಯಲು ಮುಖ್ಯಮಂತ್ರಿಗಳು ಪ್ರಯತ್ನ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ. ಆದರಂತೆ ಅಲ್ಲಿಂದ ಆದಷ್ಟು ಜಾಗ್ರತೆ ಹಣ ಪಡೆಯಲು ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನಾನು ತಂದಿರುವಂತಹ ತಿದ್ದುಪಡಿಯನ್ನು ಸಹ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರದವರು ಏನು ತಿದ್ದುಪಡಿ ತಂದಿದ್ದಾರೆ, ಅದು ಸಫಲವಾಗಬೇಕಾದರೆ, ನನ್ನ ತಿದ್ದುಪಡಿಯನ್ನು ಸಹ ಒಪ್ಪಿಕೊಳ್ಳಬೇಕೆಂದು ಹೇಳಿ, ಈಗ ತಂದಿರುವ ತಿದ್ದುಪಡಿಯನ್ನು ನಾನು ಅನುಮೋದಿಸುತ್ತೇನೆ.

† ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಚಿವರು ಏನು ಈ ಒಂದು ತಿದ್ದುಪಡಿಯನ್ನು ಮಂಡನೆ ಮಾಡಿದ್ದಾರೆ, ಇದನ್ನು ಎಲ್ಲರೂ ಸಹ ಸ್ವಾಗತ ಮಾಡುತ್ತಾರೆ. ನಾನೂ ಸಹ ಸ್ವಾಗತ ಮಾಡುತ್ತೇನೆ. ಈ ತಿದ್ದುಪಡಿ ಮಸೂದೆ ಇನ್ನೂ ಸ್ವಲ್ಪ ಮೊದಲೇ ಬಂದಿದ್ದರೆ ಚೆನ್ನಾಗಿರುತ್ತಿತ್ತು. ಇದನ್ನು ಮೊದಲೇ ತಂದಿದ್ದರೆ ಇವೊತ್ತು ಇಷ್ಟೊಂದು ಸ್ಲಮ್‌ಗಳು ಬೆಳೆಯಲು ಅವಕಾಶವಾಗುತ್ತಿರಲಿಲ್ಲ. ಮೊದಲಿನಿಂದಲೂ ಈ ಸಭೆಯಲ್ಲಿ ಆ ಕಡೆಯ ಮತ್ತು ಈ ಕಡೆಯ ಸದಸ್ಯರುಗಳು ಹೊಸ ಸ್ಲಮ್‌ಗಳು ಬರದಂತೆ ತಡೆಗಟ್ಟಿ ಎಂದು ಹೇಳುತ್ತಲೇ ಇದ್ದರು. ಆದರೆ ಯಾವ ಕಾರಣದಿಂದಲೋ ಏನೋ, ನಾವು ಮಾಡಿದಂಥ ಬೇಡಿಕೆ ಪೂರ್ಯಕೆಯಾಗಿರಲಿಲ್ಲ. ಈ ಮೊದಲು ನಾನು ಆ ಕಡೆ ಕುಳಿತಿದ್ದಾಗ, ನನ್ನ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದ ಶ್ರೀ ಶಾಮಣ್ಣನವರು ಪ್ರತಿಸಲವೂ ಹೊಸ ಸ್ಲಮ್‌ಗಳು ಬರದಂತೆ ತಡೆಗಟ್ಟಿ ಎಂದು ಹೇಳುತ್ತಲೇ ಇದ್ದರು. ಆದರೆ ಈ ಹಿಂದಿನ ಸರ್ಕಾರದವರು ಇದರ ಕಡೆಗೆ ಮನಸ್ಸು ಮಾಡಿರಲಿಲ್ಲ. ಅದಕ್ಕೆ ಕಾರಣ ಏನೋ ಇರಬಹುದು. ಆದರೆ ಒಂದು ಫಲವೆಂದರೆ, ೨–೩ ವರ್ಷಗಳ ಕೆಳಗೆ ೬೨–೬೩

ಸ್ಲಮ್‌ಗಳಿದ್ದಾರೆ, ಅದು ಈಗ ೨೩೦ರವರೆಗೆ ಹೆಚ್ಚಿದೆ. ಇದು ಅಧಿಕೃತವಾದಂಥ ಸಂಖ್ಯೆ. ಅಂದರೆ ಅನಧಿಕೃತವಾಗಿ ೪೮೦ ಕ್ಕಿಂತಲೂ ಹೆಚ್ಚಿನ ಸ್ಲಮ್‌ಗಳು ಇರಬಹುದು. ಈ ಸ್ಲಮ್‌ಗಳು ನರಕಕೂಪ ಗಳಂತೆ ಇವೆ. ನಮ್ಮ ಒಂದು ನಾಗರೀಕತೆಗೆ ಕಳಂಕ ತರುವ ರೀತಿಯಲ್ಲಿ ಇವೆ. ಕೆಲವು ಸಲ ಸಮ್ಮನ್ನು ಈ ಸ್ಲಮ್‌ಗಳ ಪತ್ತಿರ ಕರೆದುಕೊಂಡು ಹೋಗುತ್ತಾರೆ. ಈ ಸ್ಲಮ್‌ಗಳ ಒಳಕ್ಕೆ ಹೋದರೆ, ನಾವು ಬೆಂಗಳೂರು ನಗರದಲ್ಲಿದ್ದೇವೆಯೇ ಎನ್ನತಕ್ಕಂಥ ಅಸಮಾನ ಬರುತ್ತದೆ. ಇಲ್ಲಿ ಎಲ್ಲ ತರಹದ ವ್ಯವಹಾರಗಳೂ ನಡೆಯುತ್ತವೆ. ಈ ಜಾಗಗಳಲ್ಲಿ ಮನುಷ್ಯರು ಇರಲಿ, ಪ್ರಾಣಿಗಳೂ ಸಹ ವಾಸ ಮಾಡಲು ಸಾಧ್ಯವಿಲ್ಲ. ಆದರೂ ಇಂತಹ ಕಡೆಗಳಲ್ಲಿ ಒಡವರು ಹಾಗೂ ಕಾರ್ಖಾನೆ ಕಾರ್ಮಿಕರು ವಾಸ ಮಾಡುತ್ತಿದ್ದಾರೆ. ಇಂತಹ ಸ್ಲಮ್‌ಗಳು ಇನ್ನು ಮುಂದೆ ಬೆಳೆಯದಂತೆ ತಡೆಗಟ್ಟುವ ಸಲುವಾಗಿ ಮಾನ್ಯ ಧರ್ಮಸಿಂಗ್ ಅವರು ಈ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮತ್ತು ಇದನ್ನು ನಾನು ಸ್ವಾಗತ ಮಾಡುತ್ತೇನೆ. ಈ ತಿದ್ದು ಪಡಿ ಮಸೂದೆಯಲ್ಲಿ ಎರಡು ಮೂರು ವಿಷಯಗಳನ್ನು ಸೇರಿಸಿದ್ದಾರೆ. ಈ ಬಗ್ಗೆ ಒಂದೆರಡು ವಿಚಾರ ಗಳನ್ನು ಹೇಳಬೇಕೆಂದಿದ್ದೇನೆ. ಈಗ ಎಲ್ಲೆಲ್ಲಿ ಖಾಲಿ ಜಾಗ ಇರುತ್ತದೋ, ಅಲ್ಲೆಲ್ಲಾ ಸ್ಲಮ್‌ಗಳು ಬರುತ್ತಿವೆ. ಇದಕ್ಕೆ ಒಂದು ದೊಡ್ಡ ಜಾಲವೇ ಇದೆ. ಇದರ ವಿಚಾರ ಯಾರಿಗೂ ಅರ್ಥವಾಗುವುದಿಲ್ಲ. ಈ ಕೆಲಸ ಮಾಡುವುದಕ್ಕಾಗಿಯೇ ಟ್ರೈನ್ಡ್ ಸ್ಪೆಷಲಿಸ್ಟ್‌ಗಳಿದ್ದಾರೆ. ಈ ಸ್ಲಮ್‌ಗಳಲ್ಲಿ ಶೇಕಡಾ ೯೦ ರಷ್ಟು ತಮಿಳುನಾಡಿನಿಂದ ಬಂದಿರುವವರೇ ಇದ್ದಾರೆ. ಇವರೆಲ್ಲರೂ ಕೂಲಿ ಕೆಲಸ ಮಾಡುವವರು. ಈ ಮಧ್ಯವರ್ತಿ ಜನರು ಏನಿದ್ದಾರೆ, ಇವರು ಎಲ್ಲಿಯೇ ಜಾಗ ಇರಲಿ, ಗುಡಿಸಲುಗಳನ್ನು ಹಾಕುತ್ತಾರೆ. ನನ್ನ ಕ್ಷೇತ್ರದಲ್ಲಿ ಈ ಮೊದಲು ಕೇವಲ ಎರಡು ದಿವಸಗಳಲ್ಲಿ ಒಂದು ಸಾವಿರ ಗುಡಿಸಲುಗಳನ್ನು ಹಾಕಿ ಬಿಟ್ಟರು. ಇಂತಹ ಒಂದು ತಿದ್ದುಪಡಿ ಮಸೂದೆ ಆಗ ಬಂದಿದ್ದರೆ ಕೂಡಲೇ ಆ ಗುಡಿಸಲುಗಳನ್ನೆಲ್ಲಾ ಅಲ್ಲಿಂದ ತೆಗೆಸಿ ಬಿಡಬಹುದಾಗಿತ್ತು. ಆದರೆ ಈ ರೀತಿಯ ಆಕ್ಟ್ ಇಲ್ಲದ ಕಾರಣ ಆ ಗುಡಿಸಲುಗಳನ್ನು ಅಲ್ಲಿಂದ ತೆಗೆಸಲು ಬಹಳ ಕಷ್ಟವಾಯಿತು. ಇದರ ಜೊತೆಗೆ ಆ ಗುಡಿಸಲುಗಳ ಪತ್ತಿರ ದೇವರಾಜನಗರ ಎಂದು ಬೋರ್ಡು ಸಹ ಹಾಕಿದ್ದರು. ಆದರೂ ಸಹ ಆಗ ಬಿ.ಡಿ.ಎ. ಚೇರ್‌ಮನ್ ಆಗಿದ್ದ ಶ್ರೀ ಸೋಮಣ್ಣನವರಿಗೆ ಹೇಳಿ ಆ ಗುಡಿಸಲುಗಳನ್ನು ಅಲ್ಲಿಂದ ತೆಗೆಸಬೇಕಾಯಿತು. ಈಗ ಈ ತಿದ್ದುಪಡಿ ಮಸೂದೆಯಲ್ಲಿ, ಹೊಸದಾಗಿ ಈ ರೀತಿಯಾಗಿ ಗುಡಿಸಲುಗಳನ್ನು ಹಾಕತಕ್ಕಂಥ ಮಧ್ಯವರ್ತಿಗಳು ಮತ್ತು ದಳ್ಳಾಳಿಗಳು ಏನಿದ್ದಾರೆ, ಅಂತಹವರಿಗೆ ಉಗ್ರವಾದಂತ ಶಿಕ್ಷೆ ವಿಧಿಸುವಂತಹ ಒಂದು ಕಲಂನ್ನು ಸೇರಿಸಿ ದ್ದಾರೆ. ಅನಧಿಕೃತವಾಗಿ ಯಾರೇ ಗುಡಿಸಲುಗಳನ್ನು ಹಾಕಲಿ, ಅದನ್ನು ಕಾನೂನು ಬದ್ಧವಾಗಿ ಕಿತ್ತು ಅಲ್ಲಿರುವ ಜನರನ್ನು ಹೊರಗೆ ಹಾಕುವುದಕ್ಕೆ ಇದರಲ್ಲಿ ಸಾಕಷ್ಟು ಅವಕಾಶವಿದೆ. ಇದು ಸ್ವಾಗತಾರ್ಹ ವಾದ ಸಂಗತಿ. ಅದೇ ರೀತಿ ಈ ಸ್ಲಮ್‌ಗಳ ಹತ್ತಿರ ಸೇಂದಿ ಮಾರಾಟ ಮಾಡುವುದು ಮತ್ತು ಸಾಮಾನು ಗಳನ್ನು ಅಡವು ಇಟ್ಟುಕೊಳ್ಳುವಂತಹ ವ್ಯಾಪಾರವನ್ನು ಮಾಡಬಾರದೆಂದು ಇದರಲ್ಲಿ ನಿಷೇಧ ಮಾಡಿ ದ್ದಾರೆ. ಮುಖ್ಯವಾಗಿ ಈ ಗುಡಿಸಲುಗಳ ಹತ್ತಿರ ಸೇಂದಿ ವ್ಯಾಪಾರ ಮಾಡುವುದನ್ನು ನಿಲ್ಲಿಸಿರುವುದನ್ನು ನೋಡಿದರೆ, ಸರ್ಕಾರ ಒಂದು ಹೆಜ್ಜೆ ಮುಂದೆ ಇಟ್ಟಿದೆ ಎಂದು ಹೇಳಬಹುದು. ಇದು ಸ್ವಾಗತಾರ್ಹ ವಾದಂಥ ವಿಚಾರ. ಇಂತಹ ಜಾಗಗಳಲ್ಲಿ ಜೂಜುಗಾರಿಕೆ ಹಾಗೂ ಸೂಳೆಗಾರಿಕೆ ಸಹ ನಡೆಯುತ್ತಿದೆ. ಆದಕಾರಣ ಇದನ್ನು ಸಹ ತಪ್ಪಿಸಲು ಸರ್ಕಾರ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಅಲ್ಲಿರುವಂತಹ ಜನತೆಯನ್ನು ಈ ಒಂದು ಪಾಪದಿಂದ ಬಿಡುಗಡೆ ಮಾಡಿಸಲು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ಸ್ಲಮ್‌ಗಳ ಪತ್ತಿರ ಸೇಂದಿ ಅಂಗಡಿ ಇಡಬಾರದೆಂದು ಹೇಳಿದ್ದೀರಿ. ಹಾಗಿದ್ದರೆ ಈ ಸ್ಲಮ್‌ಗಳ ಬಾರ್ಡರ್‌ನಲ್ಲಿ ಇಂತಹ ಅಂಗಡಿಗಳನ್ನು ಇಡಬಹುದೇ ಎಂಬುದನ್ನು ತಿಳಿಸಬೇಕು. ಇಲ್ಲಿ ವಾಸ ಮಾಡು ತ್ತಿರುವ ಜನರು ತಮ್ಮ ದಿನದ ಸಂಪಾದನೆಯಲ್ಲಿ ಬಹಳಷ್ಟು ಹಣವನ್ನು ಕುಡಿಯಲು ಖರ್ಚು ಮಾಡು ತ್ತಾರೆ. ಸೇಂದಿ ಸಿಗದಿದ್ದರೆ ಕಳ್ಳಭಟ್ಟಿಯನ್ನಾದರೂ ಕುಡಿಯುತ್ತಾರೆ. ಆದಕಾರಣ ತಾವು ಬಾರ್ಡರ್ ಗಳಲ್ಲಿ ಅಂಗಡಿ ಇಡಲು ಅವಕಾಶ ಮಾಡಿಕೊಟ್ಟರೂ ಸಹ, ಈ ಜನರು ಅಲ್ಲಿಯೇ ಕುಡಿದು ನಂತರ ಸ್ಲಮ್‌ನೊಳಕ್ಕೆ ಹೋಗುತ್ತಾರೆ. ಆದಕಾರಣ ಈ ಅಂಶವನ್ನು ಮುಖ್ಯವಾಗಿ ಸರ್ಕಾರದವರು ವಿಚಾರ ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ಅಂಶದ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯು ತ್ತೇನೆ. ಅದೇನೆಂದರೆ, ಇಲ್ಲಿ ಇಷ್ಟು ಕಿಲೋಮೀಟರ್ ವ್ಯಾಪ್ತಿಯಲ್ಲಿ ಈ ಸ್ಲಮ್‌ಗಳು ಬರಬಾರದೆಂದು ಡಿಫೈನ್ ಮಾಡಿದ್ದಾರೆ. within 5 Kms. from the limits of the said cities ಎಂದು ಇಲ್ಲಿ ಹೇಳಿದ್ದಾರೆ. ಮಾನ್ಯ ಸಚಿವರು ಇದನ್ನು ಇನ್ನೊಂದು ಸಲ ಪರಿಶೀಲನೆ ಮಾಡಬೇಕು. ಏಕೆಂದರೆ, ಇಲ್ಲಿ ೫ ಕಿಲೋಮೀಟರ್ ಎಂದು ಹೇಳುತ್ತಾರೆಯೇ ಹೊರತು ಎಲ್ಲಿಂದ ೫ ಕಿಲೋಮೀಟರ್

ಎಂದು ಹೇಳಿಲ್ಲ. ಈಗ ಬೆಂಗಳೂರಿನ ಲಿಮಿಟ್ ಯಾವುದು ಫಿಕ್ಸ್ ಮಾಡಿದ್ದಾರೆಂದು ನೋಡಿದರೆ, ಕಾರ್ಪೊರೇಷನ್ ಲಿಮಿಟ್ ಎಂದು ಹೇಳುವುದಾದರೆ, ನಾವು ಟೋಲ್‌ಗೇಟನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

SRI A. LAKSHMISAGAR.—The Bangalore Municipal Corporation Act defines the territorial limits of the Bangalore City Corporation and similarly under the Municipalities Act of 1964, the territorial limit of each one of the Municipalities is defined.

ಶ್ರೀ ಮಳ್ಳೂರು ಆನಂದರಾವ್.—ಆಕ್ಟ್‌ನಲ್ಲಿ ಡಿಫೈನ್ ಮಾಡಿದ್ದಾರೆ. ಇಷ್ಟು ಏರಿಯಾ ಎಂದು ಹೇಳಿದ್ದಾರೆ. ಆದರೆ ಇವತ್ತು ಬೆಂಗಳೂರು ದಶ ದಿಕ್ಕುಗಳಲ್ಲೂ ಬೃಹದಾಕಾರವಾಗಿ ಬೆಳೆದಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಷ್ಟ ದಿಕ್ಕುಗಳು, ದಶದಿಕ್ಕುಗಳಲ್ಲ.

ಅಧ್ಯಕ್ಷರು.—ಅಷ್ಟ ದಿಕ್ಪಾಲಕರು.

ಶ್ರೀ ಎ. ಲಕ್ಷ್ಮೀಸಾಗರ್.—ಅಷ್ಟ ದಿಕ್ಕುಗಳು ಮತ್ತು ಭೂಮಿ ಹಾಗೂ ಆಕಾಶ ಸೇರಿದರೆ ೧೦ ಆಗುತ್ತದೆ.

ಶ್ರೀ ಮಳ್ಳೂರು ಆನಂದರಾವ್.—೫ ಕಿಲೋ ಮೀಟರ್ ಎನ್ನುವುದನ್ನು ಪುನರ್ಪರಿಶೀಲನೆ ಮಾಡಬೇಕು. ಏಕೆಂದರೆ ಇವತ್ತು ಬೆಂಗಳೂರು ಬೃಹದಾಕಾರವಾಗಿ ಬೆಳೆದಿದೆ. ಆದುದರಿಂದ ೧೦ ಕಿಲೋ ಮೀಟರ್ ದೂರ ಎಂದು ಮಾಡಬೇಕು (Agglomeration area) ಎಂದು ಬಿ. ಡಿ. ಎ. ನಲ್ಲಿ ಮಾಡಿದ್ದಾರೆ. ಅವರು ಬೌಂಡರಿಗಳನ್ನು ಲಿಮಿಟ್ ಮಾಡಿದ್ದಾರೆ. ಇದರಲ್ಲಿ ಅಲ್ಲಿಯತನಕ ಲಿಮಿಟ್ ಮಾಡಿದರೆ ಅನುಕೂಲವಾಗುತ್ತದೆ. ಏಕೆಂದರೆ ಕಾನೂನು ಪುಸ್ತಕದಲ್ಲಿರುತ್ತದೆ. ಇಷ್ಟು ಕಿಲೋ ಮೀಟರ್ ಎಂದು ಹೇಳತಕ್ಕವರು ಯಾರು ಆದುದರಿಂದ ೫ ಕಿಲೋಮೀಟರ್ ಮೀರಿ ಸ್ಲಮ್ಸ್ ಬರತಕ್ಕ ಸಾಧ್ಯತೆ ಇದೆ. ಆದುದರಿಂದ ದಯವಿಟ್ಟು ೧೦ ಕಿಲೋಮೀಟರ್ ಎಂದು ಮಾಡಬೇಕು. ಇಲ್ಲದೇಹೋದರೆ ಬಿ.ಡಿ.ಎ. ನವರು ಫಿಕ್ಸ್ ಮಾಡಿರತಕ್ಕ ಬೌಂಡರಿಯನ್ನು ಇದರಲ್ಲಿ ಸೇರಿಸಿದರೆ ಸ್ಲಮ್ಸ್ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿಯತನಕ ಹೋಗುತ್ತದೆ. ಮುಂದೆ ಬರತಕ್ಕ ನಾಲ್ಕೈದು ವರ್ಷಗಳಲ್ಲಿ ಎಲ್ಲಿಯವರೆಗೆ ಹೋಗುತ್ತದೆ ಎಂದು ಬಿ.ಡಿ.ಎ. ಡಿಫೈನ್ ಮಾಡಿದೆ. ಆದರೆ ನಾವು ಇಲ್ಲಿ ಕೇವಲ ೫ ಕಿಲೋಮೀಟರ್ ಮಾತ್ರ ಇಟ್ಟುಕೊಂಡರೆ ಮುಂದೆ ಸ್ಲಮ್ಸ್ ಡೆವಲಪ್‌ಮೆಂಟ್ ಆಗುವುದಕ್ಕೆ ಅವಕಾಶ ಕೊಟ್ಟಹಾಗೆ ಆಗುತ್ತದೆ. ಆದುದರಿಂದ ಮಾನ್ಯ ಸಚಿವರು ಬಿ. ಡಿ. ಎ. ಫಿಕ್ಸ್ ಮಾಡಿರತಕ್ಕ ಬೌಂಡರಿಯನ್ನು ಯಾವರೀತಿ ಅಳವಡಿಸಿಕೊಳ್ಳಬೇಕೋ ಆ ರೀತಿ ಅಳವಡಿಸಿಕೊಳ್ಳಬೇಕು.

ಕೊನೆಯದಾಗಿ, ತಾವು ಆಕ್ಟ್ ಮಾಡಿದ್ದೀರಿ. ಹೊಸದಾಗಿ ಸ್ಲಮ್ಸ್ ಹಾಕಿದರೆ ಕಿತ್ತುಹಾಕಬೇಕು, ಇದನ್ನು ಕಾರ್ಯಗತ ಮಾಡುವವರು ಯಾರು, ಸ್ಲಮ್ಸನ್ನು ತಡೆಹಿಡಿಯುವವರು ಯಾರು, ಕಂಪ್ಲೈಂಟ್ ಕೊಡುವವರು ಯಾರು, ಪೋಲೀಸರು ತಾವೇ ಹೋಗಿ ಹೇಗೆ ಕೊಡುತ್ತಾರೆ, ಇದರ ಬಗ್ಗೆ ಹೇಗೆ ಅರ್ಜಿ ಕೊಡಬೇಕು. ಆದ್ದರಿಂದ ಸ್ಲಮ್ಸ್ ಕ್ಲಿಯರೆನ್ಸ್ ಬೋರ್ಡ್ ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ ಎಂದು ನಾನು ಭಾವಿಸಿದ್ದೇನೆ. ಇದನ್ನು ಯಾರು ಇಂಪ್ಲಿಮೆಂಟ್ ಮಾಡುತ್ತಾರೆ ಎನ್ನುವುದನ್ನು ನನಗೆ ಹೇಳಬೇಕು.

ಅಧ್ಯಕ್ಷರು.—ಒರಿಜಿನಲ್ ಸೆಕ್ಷನ್ ೫೮ ನೋಡಿ.

"The prescribed authority may, by order in writing direct any person....."

ಶ್ರೀ ಮಳ್ಳೂರು ಆನಂದರಾವ್.—ಅಥಾರಿಟಿ ಯಾವುದು ಸ್ವಾಮಿ ?

MR. SPEAKER.—That will be prescribed. You are going to give that power now.

ಶ್ರೀ ಮಳ್ಳೂರು ಆನಂದರಾವ್.—ಇದರಲ್ಲಿ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಪ್ರಧಾನ ಪಾತ್ರ ವಹಿಸಬೇಕು. ಸ್ಲಂ ಕ್ಲಿಯರೆನ್ಸ್ ಬೋರ್ಡನ್ನು ನೋಡಿಕೊಳ್ಳುವವರು ಇಲ್ಲ, ಇದಕ್ಕೆ ಬಿಲ್ಡಿಂಗೇ ಇಲ್ಲ,

ಎಕ್ವಿಪ್‌ಮೆಂಟ್ ಇಲ್ಲ. ಬಿ.ಡಿ.ಎ. ಲೇಔಟ್‌ನಲ್ಲಿ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡುತ್ತಿದ್ದಾರಲ್ಲ ಏಕೆ ಎಂದು ಕೇಳಿದರೆ, ನಮಗೆ ಅಧಿಕಾರ ಇಲ್ಲ, ನಮ್ಮ ಹತ್ತಿರ ಸ್ಟಾಫ್ ಇಲ್ಲ, ವಿ ಆರ್ ಹೆಲ್ಪ್‌ಲೆಸ್ ಎಂದು ಹೇಳುತ್ತಾರೆ. ಬಿ.ಡಿ.ಎ. ಗೇ ಈ ಸ್ಥಿತಿ ಬಂದಿರಬೇಕಾದರೆ ಈ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಹೇಗೆ ಕಾರ್ಯ ನಿರ್ವಹಿಸುತ್ತದೆ. ಬಿ.ಡಿ.ಎ. ಏರಿಯಾದಲ್ಲಿ ರಾತ್ರೋರಾತ್ರಿ ಮನೆಗಳನ್ನು ಕಟ್ಟುತ್ತಾರೆ. ಬೆಂಗಳೂರು ಕಾರ್ಪೊರೇಷನ್ ಏರಿಯಾದಲ್ಲಿ ಅನ್‌ಆಥರೈಸ್ಡ್ ಮನೆಗಳು ಬರುತ್ತಾ ಇವೆ. ಇದನ್ನು ನಿಲ್ಲಿಸುತ್ತೀರಾ ಎಂದು ಕೇಳಿದರೆ ಕಮಿಷನರು ನಮಗೆ ಏನೂ ಅಧಿಕಾರ ಇಲ್ಲ, ನಮ್ಮ ಹತ್ತಿರ ಸಾಧನ ಇಲ್ಲ, ಎಂದು ಹೇಳುತ್ತಾರೆ. ಪೋಲೀಸರಿಗೆ ಹೇಳಿದರೆ ಅವರು ಕೋರ್ಟ್‌ನಲ್ಲಿ ಆದೇಶ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಇವೆಲ್ಲದರ ಅನುಭವದ ಮೇಲೆ ನಾನು ಇದನ್ನು ಹೇಳುತ್ತಿದ್ದೇನೆ. ಬಿ.ಡಿ ಎ ಲೇಔಟ್‌ನಲ್ಲೇ ಅನ್‌ಆಥರೈಸ್ಡ್ ಮನೆಗಳು ಬರುತ್ತಾ ಇರಬೇಕಾದರೆ ಗುಡಿಸಲುಗಳನ್ನು ಹಾಕುವುದು ಕಷ್ಟವೇ. ದಯವಿಟ್ಟು ಮಾನ್ಯ ಸಚಿವರು ಸ್ಲಂ ಕ್ಲಿಯರೆನ್ಸ್‌ಬೋರ್ಡ್‌ಗೆ ಎಕ್ವಿಪ್‌ಮೆಂಟ್, ಸಾಧನ ಸಾಕರ್ಯಗಳನ್ನು, ಜನರನ್ನು ಕೊಟ್ಟು ಮಾಡಿಸದೇ ಹೋದರೆ ಇದರ ಉದ್ದೇಶ ಸಫಲವಾಗುವುದಿಲ್ಲ ಎಂದು ಕೇಳಿಕೊಂಡು, ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ.

SRI C. M. ARUMUGHAM.—Sir, I may make a submission. Of course, you will kindly agree with me that you have not announced what is the agenda for one week. In the evening we will get the agenda and then only we come to know what is the agenda for tomorrow and which bills will be taken up. How is it possible for us to study? May be some hon. Members are experts ; they can speak on any bill at any time. But I am not. So, you will have to kindly assist us. Kindly make the other hon. Members to participate. This is a very important Bill.

MR. SPEAKER.—The programme of this Bill coming up in this week was there. It is not as if the Bill is taken up surprisingly.

SRI C. M. ARUMUGHAM.—We were not aware of it being taken up today.

MR. SPEAKER.—If the Members were to co-operate and keep up the timings... what exactly is your point ? Please tell me because you would be looking at the Clock and talking.

SRI C. M. ARUMUGHAM.—This Bill must be taken up tomorrow.

MR. SPEAKER.—Then, please tell it straight-away.

SRI. C.M. ARUMUGHAM.—We will not sit beyond 6 O' Clock. I am not saying it is a complicated Bill. But at least, Sri Ramdev will speak for about two hours. Every day he raises this. Sri Lakshmisagar will speak for two hours. I will speak at least for 10 minutes. You will kindly see that it is taken up tomorrow. Now it is 6 O' Clock, we will adjourn and will take it tomorrow.

MR. SPEAKER.—We shall close this Bill today.

SRI C. M. ARUMUGHAM.—No, sir.

ಶ್ರೀ ಜೆ. ಎಚ್. ಪಟೇಲ್.—ಇದನ್ನು ಇವತ್ತು ಮುಗಿಸುವುದಕ್ಕೆ ಆಗುವುದಿಲ್ಲ.

SRI A. LAKSHMISAGAR.—Sir, we can now take up and pass the Debt Relief Bill.

MR. SPEAKER.—We have to finish this Bill and also another Bill.

SRI C. M. ARUMUGHAM.—As you call this as a Budget Session, we must take up Budget only and for Bills, we must have a separate Session. But now we are co-operating. The hon. Law Minister will do well to note down that the Members are co-operating in passing so many Bills.

SRI Y. RAMAKRISHNA.—Thank you.

SRI C. M. ARUMUGHAM.—Otherwise, one Bill : one week. Every one of us will participate. Do not think Sir, only two Members will speak and therefore you will put the Bill to the vote of the House. We will speak together for hours on every Bill. Let the hon. Law Minister note down. Sir, it is already 6 O' Clock.

MR. SPEAKER.—I knew this.

SRI B. B. SAYANAK.—Mr. Speaker Sir, let us know how many days we are going to sit here, because we do not know how long this Session continues.

SRI H. C. SRIKANTAIAH.—Sir, I have got only one small Amendment Bill. We can take it up now and pass.

SRI C. M. ARUMUGHAM.—No.

6-00 P. M.

SRI B. B. SAYANAK.—Mr. Speaker, I want to know from you for how many days this session will be? We do not know the agenda. No meeting of the Business Advisory Committee has been called. How many days we will be meeting? I would also like to know whether this session will be ending by the end of this month or the period will be extended?

SRI H. C. SRIKANTAIAH.—Sir, they are all cooperating; now we can take this bill (Agricultural Debt Relief).

SRI C. M. ARUMUGHAM.—The result is that we have been passing so many bills with a week's time.

MR. SPEAKER.—Mr. Sayanak, we wanted to meet to-day. Since the Chief Minister could not come in time-he was expected by about 1-30; he is away in Sahitya Sammelana, I have postponed this meeting. Any how we will fix up the agenda.

SRI H. C. SRIKANTAIAH.—Sir, we shall take this Debt Relief Bill.

SRI B. B. SAYANAK.—When one bill is not passed, how he can introduce another bill?

SRI K. H. SRINIVASA.—Debt Relief Bill, we can pass it within a minute.

MR. SPEAKER.—Yes, Hon. Minister may move the bill for consideration.

Karnataka Debt Relief (Amendment) Bill 1981.

SRI H. C. SRIKANTAIAH.—I move that the Karnataka Debt Relief (Amendment) Bill be taken into consideration,

the question was proposed

SRI A. LAKSHMISAGAR.—I have a few submission to make.

SRI SHEERNALLY CHANDRASHEKAR.—Let the Hon. Minister explain t heill.

MR SPEAKER.—Why are you coming in the way.

SRI SHEERNALLY CHANDRASHEKAR.—The convention is that Minister should explain.

MR. SPEAKER.—Not necessary.

SRI A. LAKSHMISAGAR.—The Agricultural Debt Relief Act 1980 was given retrospective operation from 15/11/79 to be operative for one year from that date and it provided for applications being filed both by the debtors and also by the creditors. Now that time *i.e.*, 15th November 1980 within which both the debtors and the creditors to file their applications before the respective authorities is over. Now this Bill seeks to xtend the time till 31st December 1981. This is the purport of the bill. If it is possible for the Hon. Minister to give these information let him do so, If it is not possible for him to do so, just know, I think it is not possible he may give this information tomorrow. I want to know the total number of applications filed under Section 4(1) and 4(2) as on 15th November 1980. Then, similar applications filed under Section 5, Section 13 and applications disposed off by the Assistant Commissioner under Section 4, 5 and 13.

SRI H. C. SRIKANTAIAH.—I shall get you the information.

SRI A. LAKSHMISAGAR.—I will tell you why this is necessary, The reason I am asking for these details is not far to seek. Why these applications were not disposed off within the stipulated time *i. e.*, 15th November 1980. What was the administrative difficulty or other